ಕರ್ನಾಟಕ ಸರಕಾರ

ಫೋನ್/ಫ್ಯಾಕ್ಸ್
0820-2575383

E-Mail
rmsaudupi@gmail.com

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ,ಉಡುಪಿ
ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ , ಸಾರ್ವಜನಿಕ ಶಿಕ್ಷಣ ಇಲಾಖೆ, ರಜತಾದ್ರಿ ಮಣಿಪಾಲ-576104, ಉಡುಪಿ ಜಿಲ್ಲೆ.

ಸಂಖ್ಯೆ: ಎ1/ಆರ್.ಎಂ.ಎಸ್.ಎ. /ಶಾ.ಅ./ಹೆ.ಮ.ಸ್ವ.ರ.01/2015-16

ದಿನಾಂಕ: 06-10-2015

## ಜ್ಞಾಪನಾ

ವಿಷಯ: 2015-16 ನೇ ಸಾಲಿನ ಶಾಲಾನುದಾನ ಮತ್ತು ಸ್ವ ರಕ್ಷಣಾ ಕೌಶಲಗಳ ತರಬೇತಿ ಕಾರ್ಯಕ್ರಮದ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು ಇವರ ಪತ್ರ ಸಂಖ್ಯೆ: RMSA /ಶಾ.ಅ.02/2015-16 ದಿನಾಂಕ: 02-09-2015

2. . ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು ಇವರ ಪತ್ರ ಸಂಖ್ಯೆ: RMSA /ಹೆ.ಮ.ಸ್ವರ /02 /2015-16 ದಿನಾಂಕ: 13-08-2015

ಮೇಲಿನ ವಿಷಯ ಹಾಗೂ ಉಲ್ಲೇಖಗಳನ್ವಯ 2015-16 ನೇ ಸಾಲಿನಲ್ಲಿ ಜಿಲ್ಲೆಯ 106 ಸರಕಾರಿ ಪ್ರೌಢಶಾಲೆಗಳಿಗೆ ಮತ್ತು 5 ಮೊರಾರ್ಜಿದೇಶಾಯಿ ವಸತಿ ಶಾಲೆಗಳಿಗೆ ಪ್ರತಿ ಶಾಲೆಗೆ ರೂ. 50,000ದಂತೆ ಅನುದಾನ ಹಾಗೂ 9ನೇ ತರಗತಿಯ ಹೆಣ್ಣು ಮಕ್ಕಳ ಸ್ವರಕ್ಷಣಾ ತರಬೇತಿ ಕಾರ್ಯಕ್ರಮಕ್ಕೆ ಪ್ರತೀ ಶಾಲೆಗೆ ರೂ 4500/-ದಂತೆ ಅನುದಾನಗಳನ್ನು ಆಯಾಯ ಶಾಲೆಗಳ ಆರ್.ಎಂ.ಎಸ್.ಎ ಖಾತೆಗಳಿಗೆ ಅನುಬಂಧ 1ರಂತೆ ಅನುದಾನ ಬಿಡುಗಡೆಗೊಳಿಸಲಾಗಿದೆ.. ಮುಖ್ಯ ಶಿಕ್ಷಕರು ಖಾತೆಗೆ ಅನುದಾನ ಜಮೆಯಾದ ಒಂದು ವಾರದೊಳಗೆ ನಿಗಧಿತ ನಮೂನೆಯಲ್ಲಿ ಸ್ವೀಕೃತಿಯನ್ನು ( ಶಾಲಾ ಅನುದಾನ ಮತ್ತು ಕರಾಟೆ ಅನುದಾನಕ್ಕೆ ಪ್ರತ್ಯೇಕವಾಗಿ) ಈ ಕಛೇರಿಗೆ ಸಲ್ಲಿಸುವುದು. ಅನುದಾನದ ಬಳಕೆಯನ್ನು ಈ ಕೆಳಗಿನ ಮಾರ್ಗಸೂಚಿಯಂತೆ ಮಾಡುವುದು.

### 1. **ಶಾಲಾನುದಾನ**

- ಶಾಲಾನುದಾನಕ್ಕೆ ಸಂಬಂಧಿಸಿದಂತೆ 2009-10 ರಿಂದ ಇಲ್ಲಿಯವರೆಗೆ ನೀಡಲಾಗಿರುವ ಮಾರ್ಗಸೂಚಿ ಮತ್ತು ಸುತ್ತೋಲೆಗಳಂತೆ ಬಳಕೆ ಮಾಡುವುದು. ಈ ಸುತ್ತೋಲೆಗಳು ಇಲಾಖೆ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು ಮುಖ್ಯ ಶಿಕ್ಷಕರು ವೆಬ್‌ಸೈಟ್‌ನಿಂದ ಪಡೆದು ಕೊಳ್ಳುವುದು.
- ಶಾಲಾನುದಾನವನ್ನು ಬಳಕೆ ಮಾಡುವ ಮೊದಲು ಶಾಲಾಭಿವೃದ್ಧಿ ಯೋಜನೆ ಸಿದ್ದಪಡಿಸಿ ಎಸ್.ಡಿ.ಎಂ.ಸಿ. ಸಭೆಯಲ್ಲಿ ಅನುಮೋಧನೆ ಪಡೆದು ಅದರಂತೆ ಅನುದಾನವನ್ನು ಶಾಲೆಯ ಶೈಕ್ಷಣಿಕ ಅಭಿವೃದ್ದಿಗೆ ಬಳಸಿಕೊಳ್ಳುವುದು. ಅದರ ಒಂದು ಪ್ರತಿಯನ್ನು ಒಂದು ವಾರದೊಳಗೆ ಈ ಕಛೇರಿಗೆ ಮತ್ತು ಸಂಬಂಧಿಸಿದ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು.
- ಹಿಂದಿನ ಸಾಲಿನ ಉಳಿಕೆ ಅನುದಾನವನ್ನು ಬಳಕೆ ಮಾಡಿಕೊಳ್ಳಲು ಅವಕಾಶ ಇರುವುದಿಲ್ಲ.
- ಪ್ರತೀ ಆರ್ಥಿಕ ವರ್ಷದಲ್ಲಿ ಎಪ್ರಿಲ್ 1 ರಿಂದ ಮಾರ್ಚ್ 31ರ ವರೆಗೆ ರೂ. 50,000 ಮಾತ್ರ ಶಾಲಾನುದಾವನ್ನು ಬಳಸಿಕೊಳ್ಳಲು ಅವಕಾಶವಿರುತ್ತದೆ.

### 2. ಹೆಣ್ಣು ಮಕ್ಕಳ ಸ್ವ ರಕ್ಷಣಾ ಕೌಶಲ್ಯ ತರಬೇತಿ:

- 07-09-2015 ರಂದು ಮುಖ್ಯ ಶಿಕ್ಷಕರ ಸಭೆಯಲ್ಲಿ ನೀಡಿದ ಸುತ್ತೋಲೆಯಂತೆ ಸ್ವ ರಕ್ಷಣಾ ತರಬೇತಿಗಳನ್ನು ಆಯಾಯ ಶಾಲಾ ಮುಖ್ಯಸ್ಥರು ಆಯೋಜಿಸಲು ಕ್ರಮವಹಿಸುವುದು.

- ಜಿಲ್ಲೆಯಿಂದ ಪ್ರತಿ ಶಾಲೆಗೆ ಕರಾಟೆ ತರಬೇತಿದಾರರನ್ನು ನಿಯೋಜನೆಗೊಳಿಸಿದೆ. ಸಂಬಂಧಿಸಿದ ಶಾಲಾ ಮುಖ್ಯಸ್ಥರು ನಿಯೋಜನೆಗೊಂಡ ಕರಾಟೆ ಶಿಕ್ಷಕರನ್ನು ಸಂಪರ್ಕಿಸಿ ತರಗತಿ ವೇಳಾ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು. ಹಾಗೂ ಅದರ ಒಂದು ಪ್ರತಿಯನ್ನು ಈ ಕಛೇರಿ ಹಾಗೂ ಸಂಬಂಧಿಸಿದ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಛೇರಿಗೆ ಒಂದು ವಾರದೊಳಗೆ ಕಳುಹಿಸುವುದು.
- ಕರಾಟೆ ಶಿಕ್ಷಕರು ಸಂಬಂಧಿಸಿದ ಶಾಲೆಗಳಿಗೆ ಹಾಜರಾಗದಿದ್ದಲ್ಲಿ ತಕ್ಷಣ ಈ ಕಛೇರಿಯನ್ನು ಸಂಪರ್ಕಿಸುವುದು.
- ಸ್ವ ರಕ್ಷಣಾ ತರಬೇತಿಗಳು ನಡೆಯುತ್ತಿರುವ ಶಾಲೆಯಲ್ಲಿ ಕಾರ್ಯಕ್ರಮ ಮುಗಿದ ನಂತರ ಒಂದು ವಾರದೊಳಗೆ ಫೋಟೊ ಸಹಿತ ವರದಿಯನ್ನು ಈ ಕಛೇರಿಗೆ ಸಲ್ಲಿಸುವುದು.
- ಈ ತರಬೇತಿಯನ್ನು ನವೆಂಬರ್ 2015 ರಿಂದ ಜನವರಿ 2016ರ ತನಕ ನಡೆಸುವುದು.

ಮೇಲಿನ ಎರಡೂ ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ಮತ್ತು ಬಿಡುಗಡೆಯಾದ ವೆಚ್ಚಗಳ ಬಗ್ಗೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಮಾಡುವ ಶಾಲಾ ಬೇಟಿ ಮತ್ತು ತಪಾಸಣೆಗಳಲ್ಲಿ ಪರಿಶೀಲಿಸುವುದು.

ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಸಾ.ಶಿ. ಇಲಾಖೆ, ಉಡುಪಿ ಜಿಲ್ಲೆ.,

ಸೂಕ್ತ ಕ್ರಮಕ್ಕಾಗಿ:

1 ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ರಹ್ಮಾವರ, ಬೈಂದೂರು, ಕಾರ್ಕಳ ಕುಂದಾಪುರ,ಉಡುಪಿ
2 ಡಿ.ವೈ.ಪಿ.ಸಿ. ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ
3 ಎ.ಪಿ.ಸಿ. ಆರ್.ಎಂ.ಎಸ್.ಎ
4. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ಬ್ರಹ್ಮಾವರ, ಬೈಂದೂರು, ಕಾರ್ಕಳ ಕುಂದಾಪುರ,ಉಡುಪಿ
5. ಎಲ್ಲಾ ವಿಷಯ ಪರಿವೀಕ್ಷಕರು, ಉಪನಿರ್ದೇಶಕರ ಕಛೇರಿ
6 ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು

ಪ್ರತಿ:
1. ಕಛೇರಿ ಪ್ರತಿ.

## ಅನುಬಂಧ 1

| ಕ್ರ.ಸಂ | ಶಾಲೆಯ ಹೆಸರು | ಶಾಲಾನುದಾನ | | ಹೆಣ್ಣು ಮಕ್ಕಳ ಸ್ವ ರಕ್ಷಣಾ ಕೌಶಲ್ಯ ತರಬೇತಿ | | ಬಿಡುಗಡೆ ಗೊಳಿಸಿದ ಒಟ್ಟು ಅನುದಾನ |
|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| | | | | | | |